3803 (4699) ಶ್ರೀ ಶ್ರೀಮತಿ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ) ಬಿಜಾಪುರ ಜಿಲ್ಲೆಯ ಯಾವ ಯಾವ ಉಪ ಆರೋಗ್ಯ ಕೇಂದ್ರಗಳಲ್ಲಿ ದಿನದ 24 ಗಂಟೆಗಳ ಕಾಲ ಗರ್ಭಿಣಿ ಸ್ತ್ರಿಯರಿಗೆ ಹೆರಿಗೆ ಸೌಲಭ್ಯವನ್ನು ಕಲ್ಪಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ;

ಆ) ಸರ್ಕಾರ ಈ ಬಗ್ಗೆ ಕೈಗೊಂಡಿರುವ ಸೂಕ್ತ ಕ್ರಮಗಳೇನು

ಇ) ಈ ಸೇವೆಯನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು

ಈ) ಈ ಸೇವೆಗಾಗಿ ಸರ್ಕಾರ ಉಪ ಆರೋಗ್ಯ ಕೇಂದ್ರಗಳಿಗೆ ಒದಗಿಸುವ ಸೌಲಭ್ಯಗಳೇನು;

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಉಪ ಕೇಂದ್ರಗಳಲ್ಲಿ ಒಬ್ಬರು ಕಿರಿಯ ಮಹಿಳಾ ಆರೋಗ್ಯ ಸಹಾಯಕಯರು ಹುದ್ದೆ ಇದ್ದು 24 ಗಂಟೆಗಳ ಸೇವಾ ಸೌಲಭ್ಯ ಕಲ್ಪಿಸಿಲ್ಲ ಆದರೆ ಬಿಜಾಪುರ ಜಿಲ್ಲೆ 42 ಪ್ರಾಥಮಿಕ ಕೇಂದ್ರಗಳಲ್ಲಿ ದಿನದ 24 ಗಂಟೆಗಳ ಹೆರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಏಪ್ರಿಲ್ 2004 ರಿಂದ ಮಾರ್ಚ್ 05 ರವರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 4563 ಹೆರಿಗೆಗಳನ್ನು ನಿರ್ವಹಿಸಲಾಗಿದೆ.

ಆ) ಆರ್. ಸಿ.ಹೆಚ್. –1 ರ ಕಾರ್ಯಕ್ರಮದಲ್ಲಿ ಬಿಜಾಪುರ ಜಿಲ್ಲೆಯಲ್ಲಿ 2000–01 ರಿಂದ ಕೆಲವು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಇ) ಈ ಸೇವಾ ಸೌಲಭ್ಯಗಳನ್ನು ಆರ್. ಸಿ.ಹೆಚ್. –1 ರಡಿಯಲ್ಲಿ ಈಗಾಗಲೇ ಅನುಷ್ಠಾನಗೊಳಿಸಲಾಗಿದ್ದು ಆರ್. ಸಿ. ಹೆಚ್.–2 ರಡಿಯಲ್ಲಿ ಮುಂದಿನ 5 ವರ್ಷಗಳ ವರೆಗೆ ಮುಂದುವರಿಸಲಾಗುವುದು.

ಈ) ಈ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

1. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳ ನೇಮಕ .

2. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಶುಶ್ರೂಷೆಕಿಯರು ನೇಮಕ

3. ರೂ. 330/– ಗಳನ್ನು ಒಂದು ಹೆರಿಗೆಗೆ ಕೊಡುವ ಸೌಲಭ್ಯ (ವೈದ್ಯರಿಗೆ 200/– ಶುಶ್ರೂಷಕಿಯರಿಗೆ 100/– ಮತ್ತು ಸ್ವಚ್ಚಗೊಳಿಸುವವರಿಗೆ 30/–) ಈ ಗೌರವ ಧನವನ್ನು ರಾತ್ರಿ 8.00 ರಿಂದ ಬೆಳಿಗ್ಗೆ 7.00 ರವರೆಗೆ ನೆರೆವೇರಿಸುವ ಹೆರಿಗೆಗಳಿಗೆ ಮಾತ್ರ ಕೊಡಲಾಗುವುದು

4. ಗಂಡಾಂತರದ ಹೆರಿಗೆ ಕೇಸುಗಳನ್ನು ಸ್ಥಳಾಂತರಿಸಲು ರೂ. 200/– ಪ್ರಯಾಣ ಭತ್ಯೆಯ ಸೌಲಭ್ಯವನ್ನು ಸಹ ಕಲ್ಪಿಸಲಾಗಿದೆ.

3804 (4700); ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)ಮಾನ್ಯ ಡಾ॥ ಹೆಚ್,ಸಿ ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ) ಬಿಜಾಪುರ ಜಿಲ್ಲೆಗೆ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವಂತೆ ಸರ್ಕಾರದ ಮುಂದೆ ಪ್ರಸ್ತಾವನೆ ಬಂದಿರುವುದೆ;

ಆ) ಪ್ರಸ್ತಾವನೆಯಲ್ಲಿ ಯಾವ ಯಾವ ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಪ್ರಸ್ತಾಪಿಸಲಾಗಿದೆ.

ಇ) ಪ್ರಸ್ತಾಪತ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರ್ಕಾರದ ಮಂಜೂರಾತಿ ನೀಡಿದೆಯೇ;

ಈ) ನೀಡದೇ ಇದ್ದಲ್ಲಿ ಕಾರಣಗಳೇನು;

ಉ) ಸರ್ಕಾರ ಯಾವ ಕಾಲ ಮಿತಿಯೊಳಗೆ ಪ್ರಸ್ತಾಪಿತ ಆರೋಗ್ಯ ಕೇಂದ್ರಗಳಿಗೆ ಮಂಜೂರಾತಿ ನೀಡುವುದು?

ಡಾ॥ ಹೆಚ್,ಸಿ ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸೊರಾಡೋಣ ಗೊಳಸಾರ ಬಂಧನಾಳ್, ಜೈನಾಪುರ ಮುತ್ತಗಿ ಹರನಾಳ, ಹುಣಶ್ಯಾಳ್, ಮುಳಸಾವಳಗಿ ದೇವಣಗಾಂವ, ಚಟ್ಟರಕಿ, ಯರಗಲ್ ಬಿಕೆ, ಹಿಟ್ನಳ್ಳಿ ಎಲ್. ಟಿ. ಸಾಲೋಟಗಿ ಜಂಬಗಿ ಅರಕೇರಿ ಬಿಜ್ಜರಗಿ ದೆ. ಗೆಣ್ಣೂರ, ಮಕಣಾಪೂರ ಮತ್ತು ತಿಡಗುಂದಿ ಒಟ್ಟು 19 ಕೇಂದ್ರಗಳ ಮಂಜೂರಾತಿಗಾಗಿ ಪ್ರಸ್ತಾಪಿಸಲಾಗಿದೆ.

ಇ) ಇಲ್ಲ.

ಈ) ಈಗಾಗಲೇ ಭಾರತ ಸರ್ಕಾರದ ಮಾರ್ಗಸೂಚಿ ಪ್ರಕಾರ ಹೆಚ್ಚಿನ ಪ್ರಾ.ಆ. ಕೇಂದ್ರಗಳಿವೆ.

ಉ) ಶೀಘ್ರವೇ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.